ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 29-06-1970

*<u>ಸಮರ್ಪಣೆಯ ವಿಶಾಲ ರೂಪ</u>* (समर्पण का विशाल रूप)

ಇಂದು ಬಾಪ್ ದಾದಾ ಪ್ರತಿಯೊಬ್ಬರ ಈ ಸಂಗಮ ಸಮಯದ (ಭವಿಷ್ಯದಲ್ಲಿ ನಾಲ್ಕು ಮೂರ್ತಿಗಳನ್ನು ನೋಡುತ್ತಿದ್ದರು. ಆ ನಾಲ್ಕು ಮೂರ್ತಿಗಳು ಯಾವವು? ತಮ್ಮ ಮೂರ್ತಿಯನ್ನು ತಿಳಿದಿದ್ದೀರಾ? (ಕೆಲವರು ಹೇಳಿದರು). ಏನೆಲ್ಲವನ್ನು ವರ್ಣನೆ ಮಾಡಿದಿರೋ ಅಂತಹ ಮೂರ್ತಿಗಳು ಇನ್ನೂ ಆಗಿಲ್ಲವೋ ಅಥವಾ ಆಗಿರುವಿರೋ? ಕೊನೆಯಲ್ಲಾದರೂ ತೀವ್ರವಾಗಿ ಹೋಗುತ್ತೇವೆ ಎಂದು ತಿಳಿದಿರುವಿರೋ? ಆದರೆ ಕೊನೆಯ ಸಮಯ ತೀವ್ರವಾಗಿ ಹೋಗಬಲ್ಲಿರಾ? ಎಷ್ಟು ಬಹಳ ಸಮಯದಿಂದ ತಮ್ಮನ್ನು ಸಫಲತೆಯ ಮೂರ್ತಿಯಾಗಿ ಮಾಡಿಕೊಳ್ಳುವಿರೋ ಅಷ್ಟು ಬಹಳ ಸಮಯ ಅಲ್ಲಿ ಸಂಪೂರ್ಣ ರಾಜ್ಯದ ಅಧಿಕಾರಿಯಾಗುವಿರಿ. ಯಾರಾದರೂ ಬಹಳ ಸಮಯದಿಂದ ಸಫಲತೆಯ ಮೂರ್ತಿಯಾಗಿಲ್ಲವಾದರೆ ರಾಜ್ಯದ ಅಧಿಕಾರವೂ ಸ್ವಲ್ಪ ಸಮಯವೇ ಸಿಗುತ್ತದೆ. ಸಂಪೂರ್ಣ ಸಮಯಕ್ಕಾಗಿ ಸಿಗುವುದಿಲ್ಲ. ಯಾರು ಬಹಳ ಸಮಯದಿಂದ ಸಂಪೂರ್ಣರಾಗುವ ಪುರುಷಾರ್ಥದಲ್ಲಿ ಮಗ್ನರಾಗಿರುತ್ತಾರೋ ಅವರೇ ಸಂಪೂರ್ಣ ಸಮಯ ರಾಜ್ಯದ ಅಧಿಕಾರಿಗಳು ಆಗುತ್ತಾರೆ. ತಾವೆಲ್ಲರೂ ತಮ್ಮ ನಾಲ್ಕೂ ಮೂರ್ತಿಗಳನ್ನೂ ಅರಿತಿದ್ದೀರಾ? ಯಾವ ನಾಲ್ಕು ಮೂರ್ತಿಗಳನ್ನು ನೋಡುತ್ತಿದ್ದಾರೆ? ಇದೂ ಸಹ ಸಂಪೂರ್ಣರಾಗುವ ಗುರಿಯಾಗಿದೆ. ಒಂದಾಗಿದೆ ಜ್ಞಾನಮೂರ್ತಿ, ಎರಡನೆಯದು ಗುಣಮೂರ್ತಿ, ಮೂರನೆಯದಾಗಿ ದಾನಮೂರ್ತಿ ಮತ್ತು ಸಂಪೂರ್ಣ ಸಫಲತೆಯಮೂರ್ತಿ. ಸೇವೆ ಮಾಡುವುದು ಎಂದರೆ ಮಹಾದಾನಿಯಾಗುವುದು ಎಂದು ಮೊದಲೂ ಸಹ ಹೇಳಿದ್ದೆವು. ಪ್ರತಿಯೊಬ್ಬರ ಈ ನಾಲ್ಕು ಮೂರ್ತಿಗಳನ್ನು ನೋಡುತ್ತಿದ್ದರು. ನಾಲ್ಕು ಮುಖಗಳ ಗಾಯನವೂ ಇದೆ. ಒಂದು ಮೂರ್ತಿಯಲ್ಲಿ ನಾಲ್ಕು ಮೂರ್ತಿಗಳ ಸಾಕ್ಷಾತ್ಕಾರ ಎಲ್ಲರಿಗೂ ಮಾಡಿಸಬೇಕು. ಒಂದು ಮೂರ್ತಿಯ ಕೊರತೆಯಿದ್ದರೂ ಅಲ್ಲಿ ಕೂಡ ಅಷ್ಟು ಕೊರತೆಯಿರುವುದು. ಹೇಗೆ ಇಲ್ಲಿ ಜೊತೆಗೆ ತೆಗೆದುಕೊಂಡು ಹೋಗುವ ಸಾಮಗ್ರಿಗಳನ್ನು ಬುಕಿಂಗ್ ಮಾಡಿದರೆ ಆ ಸ್ಥಾನದಲ್ಲಿ ಸಿಗುತ್ತವೆಯೋ ಹಾಗೆಯೇ ಇದೂ ಸಹ ಬುಕಿಂಗ್ ಆಫೀಸ್ ಆಗಿದೆ. ಎಷ್ಟು ಇಲ್ಲಿ ಬುಕಿಂಗ್ ಮಾಡುವಿರೋ ಅಷ್ಟು ಅಲ್ಲಿ ಪ್ರಾಪ್ತಿಯಾಗುವುದು. ನಾಲ್ಕೂ ಮೂರ್ತಿಗಳು ಆಗಿರುವಿರಾ ಎಂದು ಯೋಚಿಸಿ, ಚತುರ್ಮುಖರಾಗಿರುವಿರಾ? ಎಷ್ಟು ಇಲ್ಲಿ ತಮ್ಮ ಮೂರ್ತಿಯಲ್ಲಿ ಸರ್ವ ಮಾತುಗಳ ಧಾರಣೆ ಮಾಡಿಕೊಳ್ಳುವಿರೋ ಅಷ್ಟು ಭವಿಷ್ಯದಲ್ಲಿ ರಾಜ್ಯವಂತೂ ಸಿಗುವುದು ಆದರೆ ದ್ವಾಪರದಲ್ಲಿ ತಮ್ಮ ಜಡಮೂರ್ತಿಗಳೂ ಸಹ ಈ ಸಂಗಮದ ಮೂರ್ತಿಗನುಸಾರವಾಗಿ ಆಗುವವು. ತಿಳಿಯಿತೇ? ಈಗ ಸಂಪೂರ್ಣ ಮೂರ್ತಿಯಾಗಲು ಯಾವ ಗುರಿಯನ್ನು ಎದುರಿಗೆ ಇಟ್ಟುಕೊಳ್ಳುವಿರಿ? ಚಿತ್ರವನ್ನು ನೋಡಿ ಅವರು ಯಾವ ಪುರುಷಾರ್ಥದಿಂದ ಹೀಗೆ ಆದರು ಎಂಬುದನ್ನು ತಿಳಿಯಿರಿ ಎಂದು ಹೇಗೆ ಭಕ್ತಿಯವರಿಗೆ ತಿಳಿಸುತ್ತೀರೋ ಹಾಗೆಯೇ ತಾವು ಸಂಪೂರ್ಣ ಮೂರ್ತಿಗಳಾಗಲು ಯಾವ ಗುರಿಯನ್ನು ಎದುರಿಗೆ ಇಟ್ಟುಕೊಳ್ಳುವಿರಿ? ಸಾಕಾರದಲ್ಲಿ ಸಂಪೂರ್ಣ ಕರ್ಮಾತೀತರಾಗಲು ಗುರಿ ಒಂದೇ ಆಗಿದೆಯಲ್ಲವೇ? ಅವರು ಯಾವ ಗುರಿಯನ್ನು ಇಟ್ಟುಕೊಂಡಿದ್ದರು? ಯಾವ ಮಾತುಗಳಲ್ಲಿ ಸಂಪೂರ್ಣರಾದರು? ಸಂಪೂರ್ಣ ಶಬ್ದವನ್ನು ಎಷ್ಟು ವಿಶಾಲತೆಯಿಂದ ಧಾರಣೆ ಮಾಡಿದರು ಎಂಬುದು ಗೊತ್ತಿದೆಯಲ್ಲವೇ? ಶಬ್ದ ಒಂದೇ ಆಗಿದೆ ಸಂಪೂರ್ಣ ಆದರೆ ಎಷ್ಟು ವಿಶಾಲರೂಪದಿಂದ ಧಾರಣೆ ಮಾಡಿ ಈ ರೀತಿಯಾದರು.ಸರ್ವ ಸಮರ್ಪಣೆಯ ಗುರಿಯಿಂದಲೇ ಸಂಪೂರ್ಣರಾದರು.

ಎಷ್ಟು ಸಮರ್ಪಣೆಯೋ ಅಷ್ಟು ಸಂಪೂರ್ಣ, ಆದರೆ ಸಮರ್ಪಣೆಯ ವಿಶಾಲರೂಪ ಯಾವುದಾಗಿದೆ? ಎಷ್ಟು ವಿಶಾಲರೂಪದಿಂದ ಇದನ್ನು ಧಾರಣೆಮಾಡುವಿರೋ ಅಷ್ಟು ವಿಶಾಲ ಬುದ್ಧಿಯವರಾಗುವಿರಿ ಮತ್ತು ವಿಶ್ವರಾಜ್ಯಾಧಿಕಾರಿ ಆಗುವಿರಿ, ಆ ವಿಶಾಲತೆ ಯಾವುದಿತ್ತು? ಇದರಲ್ಲಿಯೂ ನಾಲ್ಕು ಮಾತುಗಳಿವೆ. **ಒಂದು ತಮ್ಮ ಪ್ರತಿಯೊಂದು ಸಂಕಲ್ಪ ಸಮರ್ಪಣೆ, ಎರಡನೆಯದು ಪ್ರತಿ ಕ್ಷಣ ಸಮರ್ಪಣೆ ಎಂದರೆ ಸಮಯ ಸಮರ್ಪಣೆ, ಮೂರನೆಯದು ಕರ್ಮವೂ ಸಮರ್ಪಣೆ ಮತ್ತು ನಾಲ್ಕನೆಯದಾಗಿ ಏನೆಲ್ಲಾ ಸಂಬಂಧ ಮತ್ತು ಸಂಪತ್ತು ಇದೆಯೋ ಅದೂ ಸಮರ್ಪಣೆ.** ಸರ್ವ ಸಂಬಂಧದ ಸಮರ್ಪಣೆಯಾಗಬೇಕು. ಆ ಸಂಬಂಧದಲ್ಲಿ ಲೌಕಿಕ

ಸಂಬಂಧವಂತೂ ಬಂದೇಬರುತ್ತದೆ. ಆದರೆ ಆತ್ಮ ಮತ್ತು ಶರೀರದ ಸಂಬಂಧವೇನಿದೆಯೋ ಅದರದ್ದೂ ಸಮರ್ಪಣೆ. ಇಷ್ಟರವರೆಗೆ ಸಂಬಂಧವನ್ನು ಸಮರ್ಪಣೆ ಮಾಡಿರುವಿರಾ? ವಿನಾಶಿ ಸಂಪತ್ತು ಸಮರ್ಪಿಸುವುದು ಬಹಳ ದೊಡ್ಡ ಮಾತೇನಲ್ಲ, ಆದರೆ ಜನ್ಮಸಿದ್ಧ ಅಧಿಕಾರದ ರೂಪದಲ್ಲಿ ಪ್ರಾಪ್ತಿಯಾಗುವ ಅವಿನಾಶಿ ಸಂಪತ್ತು- ಸುಖ, ಶಾಂತಿ, ಪವಿತ್ರತೆ, ಪ್ರೇಮ, ಆನಂದವನ್ನೂ ಸಹ ಅನ್ಯ ಆತ್ಮರ ಸೇವೆಯಲ್ಲಿ ಸಮರ್ಪಣೆ ಮಾಡಿದರು. ಮಕ್ಕಳ ಶಾಂತಿಯಲ್ಲಿಯೇ ಸ್ವಯಂನ ಶಾಂತಿ ಎಂದು ತಿಳಿದರು. ಆತ್ಮರಿಗೆ ಶಾಂತಿಯನ್ನು ಕೊಡುವುದರಲ್ಲಿಯೇ ತಮ್ಮ ಶಾಂತಿ ಎಂದು ತಿಳಿದರು. ಇದಾಗಿದೆ ಲೌಕಿಕ ಸಂಪತ್ತು, ಮತ್ತು ಈಶ್ವರೀಯ ಸಂಪತ್ತನ್ನು ಸಮರ್ಪಣೆ ಮಾಡಿ ತಮ್ಮ ಸಾಕ್ಷಿ ಸ್ಥಿತಿಯಲ್ಲಿರುವುದೇ ಸಮರ್ಪಣೆಯ ಶಬ್ದದ ವಿಶಾಲ ರಹಸ್ಯವಾಗಿದೆ. ತಿಳಿಯಿತೇ? ಈ ರೀತಿ ವಿಶಾಲ ರೂಪದಿಂದ ಧಾರಣೆ ಮಾಡುವವರೇ ಸಂಪೂರ್ಣ ಮೂರ್ತಿ ಮತ್ತು ಸಫಲತೆಯ ಮೂರ್ತಿಯಾಗುತ್ತಾರೆ. ಆದ್ದರಿಂದ ಸಮರ್ಪಣೆ ಶಬ್ದವನ್ನು ಸಾಧಾರಣ ಅರ್ಥದಲ್ಲಿ ತಿಳಿಯಬೇಡಿ. ಲೌಕಿಕದನ್ನು ಸಮರ್ಪಣೆ ಮಾಡುವುದು ಸಹಜವಾಗಿದೆ ಆದರೆ ಈಶ್ವರೀಯ ಪ್ರಾಪ್ತಿಯನ್ನು ಸಮರ್ಪಣೆ ಮಾಡುವುದು ಎಂದರೆ ಮಹಾದಾನಿ ಮತ್ತು ಅನ್ಯರ ಶುಭಚಿಂತಕರೂ ಆಗಬೇಕು. ಇದು ನಂಬರವಾರ್ ಯಥಾಯೋಗ್ಯ ಯಥಾಶಕ್ತಿಯಾಗಿರುತ್ತದೆ. ಇಷ್ಟರವರೆಗೆ ಸಮರ್ಪಣೆ ಮಾಡುವವರನ್ನು ಸಂಪೂರ್ಣ ಸಮರ್ಪಣೆ ಎಂದು ಹೇಳಲಾಗುತ್ತದೆ. ಹೀಗೆ ಸಂಪೂರ್ಣ-ಮೂರ್ತಿ ಆಗಿರುವಿರಾ? ತನ್ನತನವೆಲ್ಲವೂ ಪೂರ್ಣವಾಗಿ ಸಮಾವೇಶಗೊಳ್ಳಲಿ, ಯಾವುದೇ ವಸ್ತು ಇನ್ನೊಂದು ವಸ್ತುವಿನೊಂದಿಗೆ ಸಮಾವೇಶಗೊಂಡರೆ ಆಗ ಎರಡೂ ಸಮಾನವಾಗುತ್ತದೆ ಆದ್ದರಿಂದ ಸಮಾವೇಶಗೊಳ್ಳುವುದು ಎಂದರೆ ಸಮಾನವಾಗುವುದು. ಆದ್ದರಿಂದ ನನ್ನದು ಎಂಬ ಭಾವನೆ ಎಷ್ಟು ಸಮಾವೇಶ ವಾಗುವುದೋ, ಅಷ್ಟು ಸಮಾನ ಮೂರ್ತಿ ಆಗುವಿರಿ. ತಾವು ಅನ್ಯ ಆತ್ಮರ ಸೇವೆ ಮಾಡುವಾಗ ಯಾವ ಗುರಿಯನ್ನು ಇಟ್ಟುಕೊಂಡು ಮಾಡುತ್ತೀರಿ? (ತಮ್ಮ ಸಮಾನ ಮಾಡುವ) ತಮ್ಮ ಸಮಾನ ಅಲ್ಲ ಆದರೆ ತಂದೆಯ ಸಮಾನ ಮಾಡಬೇಕು. ತಮ್ಮ ಸಮಾನ ಮಾಡಿದರೆ ತಮ್ಮಲ್ಲಿರುವ ಕೊರತೆ ಅವರಲ್ಲಿಯೂ ಬರುವುದು.

ಸಂಪೂರ್ಣರಾಗಬೇಕೆಂದರೆ ತಮ್ಮ ಸಮಾನರಲ್ಲ ಆದರೆ ತಂದೆಯ ಸಮಾನ ಮಾಡಬೇಕು. ತಂದೆ ಹೇಗೆ ತನಗಿಂತಲೂ ಶ್ರೇಷ್ಠ ಮಾಡುತ್ತಾರಲ್ಲವೇ? ತಂದೆಯ ಸಮಾನ ಮಾಡಿದರೆ ತಂದೆಯನ್ನು ಅನುಕರಣೆ ಮಾಡಿದಂತಾಗುವುದು, ಆದ್ದರಿಂದ ಈಗ ತಮ್ಮ ಸಮಾನರಲ್ಲ ಆದರೆ ತಂದೆಯ ಸಮಾನ ಮಾಡಬೇಕು. ಒಂದು ವೇಳೆ ತಾವು ತಮ್ಮ ಸಮಾನ ಮಾಡುವ ಗುರಿಯನ್ನಿಟ್ಟುಕೊಂಡರೆ ಅವರಲ್ಲಿ ಬಹಳ ಲೋಪಗಳು ಬರುವವು ಏಕೆಂದರೆ ತಮ್ಮ ಗುರಿಯೇ ಇಷ್ಟಿತ್ತು. ಆದ್ದರಿಂದ ಗುರಿ ಸದಾ ಸಂಪೂರ್ಣತೆಯದಿರಬೇಕು. ಯಾರು ಸಂಪೂರ್ಣಮೂರ್ತಿ, ಪ್ರತ್ಯಕ್ಷ, ಪ್ರಖ್ಯಾತರಾಗಿರುವರೋ ಅವರ ಗುರಿ ಬೇಡ, ಯಾರು ಈಗ ಗುಪ್ತರಾಗಿರುವರೋ, ಪ್ರತ್ಯಕ್ಷತೆಯಲ್ಲಿ ಇಲ್ಲವೂ, ಅವರ ಗುರಿಯನ್ನು (ಗುಪ್ತವಾಗಿ ಪುರುಷಾರ್ಥ ಮಾಡುವ ಮಕ್ಕಳ ಬಗ್ಗೆ ಹೇಳುತ್ತಿದ್ದಾರೆ) ಇಡಬಾರದು. ಏಕೆಂದರೆ ಹೇಗೆ ಗುರಿಯೋ ಹಾಗೆಯೇ ಉದ್ದೇಶವಿರುತ್ತದೆ. ಆದ್ದರಿಂದ ಗುರಿ-ಉದ್ದೇಶವನ್ನು ಶ್ರೇಷ್ಠವಾಗಿಟ್ಟುಕೊಂಡರೆ ಪ್ರಾಪ್ತಿಯೂ ಶ್ರೇಷ್ಠವಾಗಿರುವುದು. ಈಗ ಮೂರನೆಯ ಕಣ್ಣು ಕೇವಲ ಗುರಿಯ ಕಡೆಗೆ ಕೇಂದ್ರಿತವಾಗಿರಬೇಕು. ಮಗ್ನ ಅವಸ್ಥೆಯಲ್ಲಿರುವವರ ಕಣ್ಣು ಹೇಗೆ ಸ್ಥಿರ ಆಗಿರುತ್ತವೆಯೋ ಹಾಗೆಯೇ ಈ ಮೂರನೆಯ ಕಣ್ಣು, ದಿವ್ಯಬುದ್ಧಿಯ ಕಣ್ಣು ಸದಾ ಸ್ಥಿರ, ಏಕರಸವಾಗಿರಬೇಕು. ಸ್ಥಿರ ಎಂದರೆ ಒಬ್ಬನಲ್ಲಿಯೇ ಸ್ಥಿರವಾದ ಮಗ್ನ ರೂಪವಾಗಿ ಕಂಡು ಬರಬೇಕು. ಮೂರನೆಯ ಕಣ್ಣಿನ ಸಾಕ್ಷಾತ್ಕಾರ ಹೇಗೆ ಆಗುವುದು? (ಮಸ್ತಕದಿಂದ), ಮಸ್ತಕದಲ್ಲಿ ಹೊಳಪು, ಕಣ್ಣುಗಳಲ್ಲಿ ಕಾಂತಿ ಕಂಡುಬರುವುದು, ಇದರಿಂದಲೂ ಇವರ ಮೂರನೆಯ ಕಣ್ಣು ಮಗ್ನವಾಗಿದೆಯೋ ಅಥವಾ ಯುದ್ಧ ಸ್ಥಳದಲ್ಲಿದೆಯೋ ಎಂಬುದು ಗೊತ್ತಾಗುವುದು, ಕಣ್ಣು ಸ್ವಲ್ಪ ಸರಿಯಿಲ್ಲದಿರುವಾಗ ರೆಪ್ಪೆಗಳು ಕ್ಷಣಕ್ಷಣವೂ ಮೇಲೆ ಕೆಳಗೆ ಆಗುತ್ತಿರುತ್ತವೆ. ಈ ಮೂರನೆಯ ಕಣ್ಣು ಯಥಾರ್ಥ ರೀತಿಯಲ್ಲಿ ಸರಿಯಾಗಿದ್ದರೆ ಎಂದರೆ ದಿವ್ಯಬುದ್ಧಿ ಸ್ವಚ್ಛವಾಗಿದ್ದರೆ ಸ್ಥಿರವಾಗಿರುವುದು. ಕಣ್ಣಲ್ಲಿ ಏನಾದರೂ ಕಸ ಬಿದ್ದಿದ್ದರೆ ಏನಾಗುತ್ತದೆ? (ರೆಪ್ಪೆಗಳು ಅಲುಗಾಡುತ್ತವೆ). ಧೂಳಿಗೆ ಗುರುತು ಏನು ರೆಪ್ಪೆಗಳು ಚಲಿಸುವುದು. ಯಥಾರ್ಥ ಆರೋಗ್ಯದ ಲಕ್ಷಣ ಸ್ಥಿರವಾಗಿರುವುದು. ಈ ವಿಷಯದ ಸಾಕ್ಷಾತ್ಕಾರ ನಿಮ್ಮ ಮಸ್ತಕದಿಂದ ಆಗುತ್ತದೆ ನಯನಗಳಿಂದಲೂ ಆಗುತ್ತದೆ. ನಮ್ಮ ಮೂರನೆಯ ಕಣ್ಣು ಬೇಗನೆ ಮುಚ್ಚಿ ತೆಗೆಯುತ್ತದೆಯಾ ಅಥವಾ ಸದಾ ತೆರೆದಿರುತ್ತದೆಯಾ ಎಂಬುದನ್ನು ಪರೀಕ್ಷಿಸಿ.

ಯಾವ ನೆನಪಿನಲ್ಲಾದರೂ ಮಗ್ನರಾಗಿದ್ದರೆ ಕಣ್ಣುಗಳು ಸ್ಥಿರವಾಗಿರುತ್ತವೆ. ಆದ್ದರಿಂದ ಇಲ್ಲಿಯೂ ಒಬ್ಬನ ನೆನಪಿನಲ್ಲಿ ಮಗ್ನರಾಗಿರುವವರೇ ಸಂಪೂರ್ಣ ಸ್ಥಿತಿಯಲ್ಲಿ ಸ್ಥಿತರಾಗಲು ಸಾಧ್ಯ ಇಲ್ಲವಾದರೆ ಕಣ್ಣುಗಳಂತೆ ಮುಚ್ಚಿ ತೆಗೆಯುತ್ತಿರುತ್ತವೆ. ಸ್ಥಿರವಾಗಿರುವುದಿಲ್ಲ. ಏನಾದರೂ ಕಸವಿದ್ದರೆ ಬೇಗನೆ ತೆಗೆಯಿರಿ, ಇಲ್ಲವಾದರೆ ಒಂದು ನಗೆಹನಿಯನ್ನು ಹೇಳುವೆವು ಯಾರಾದರೂ ತಮ್ಮ ಸಾಕ್ಷಾತ್ಕಾರ ಮಾಡಿದರೆ ಹಾಗೂ ಆಗ ನಿಮ್ಮ ಮೂರ್ತಿ ಮೇಲೆ ಕೆಳಗೆ ಆಗುತ್ತಿದ್ದರೆ ಏನಾಗುತ್ತದೆ ಎಂದು ಯೋಚಿಸಿ. ಹೇಗೆ ಫೋಟೋ ತೆಗೆಯುವಾಗ ಅಲುಗಾಡಲು ಬಿಡುವುದಿಲ್ಲ. ಒಂದು ಮಳೆ ಅಲುಗಾಡಿದರೆ ಫೋಟೋ ಕೆಡುತ್ತದೆ. ಅದೇ ರೀತಿ ತಮ್ಮ ಸ್ಥಿತಿ ಅಲುಗಾಡಿದರೆ ಎಂತಹ ಸಾಕ್ಷಾತ್ಕಾರವಾಗುವುದು? ಫೋಟೋ ತೆಗೆಯುವಾಗ ತಮ್ಮನ್ನು ಎಷ್ಟು ಸ್ಥಿರವಾಗಿ ಇಟ್ಟುಕೊಳ್ಳುತ್ತೀರೋ ಅಷ್ಟು ಭಕ್ತರು ಪ್ರತಿಕ್ಷಣ ನಮ್ಮ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದಾರೆ ಎಂದು ಸದಾ ತಿಳಿಯಿರಿ. ಆಗ ಸಾಕ್ಷಾತ್ಕಾರಮೂರ್ತಿ ಎಂದರೆ ಸ್ಥಿರ ಮೂರ್ತಿಯಾಗುವಿರಿ, ಇಲ್ಲವಾದರೆ ಭಕ್ತರಿಗೆ ಸ್ಪಷ್ಟ ಸಾಕ್ಷಾತ್ಕಾರವಾಗುವುದಿಲ್ಲ, ಸ್ಪಷ್ಟ ಸಾಕ್ಷಾತ್ಕಾರ ಮಾಡಿಸಲು ಸ್ಥಿರಬುದ್ಧಿ, ಏಕಾಗ್ರ ಸ್ಥಿತಿಯ ಆವಶ್ಯಕತೆಯಿದೆ. ತಿಳಿಯಿತೆ ಈಗಿನಿಂದಲೇ ಭಕ್ತರು ಒಬ್ಬೊಬ್ಬರ ಸಾಕ್ಷಾತ್ಕಾರ ಮಾಡುವರು. ಆ ಬೀಜ ಎಂದರೆ ಸಂಸ್ಕಾರ ಭಕ್ತರ ಆತ್ಮರಲ್ಲಿ ತುಂಬುವುದು, ಆ ಸಂಸ್ಕಾರ ಕ್ಲುಪ್ತವಾಗಿ ನಂತರ ದ್ವಾಪರದಲ್ಲಿ ಅದೇ ಸಂಸ್ಕಾರಗಳು ಪ್ರಕಟವಾಗುವುದು. ಧರ್ಮ ಸ್ಥಾಪಕರು ಇಲ್ಲಿ ಸಂದೇಶವನ್ನು ತೆಗೆದುಕೊಂಡು ನಂತರ ಅದೇ ಪ್ರಕಟವಾಗುತ್ತದೆ ಎಂದು ಹೇಗೆ ನೀವು ತಿಳಿಸುತ್ತೀರೋ ಹಾಗೆಯೇ ತಮ್ಮೆಲ್ಲರ ಭಕ್ತರು ಮತ್ತು ಪ್ರಜೆಗಳು ಸಂಸ್ಕಾರ ತೆಗೆದುಕೊಂಡು ಹೋಗುವರು ಮತ್ತೆ ಅದೇ ರೀತಿ ಪ್ರಕಟವಾಗುವುದು. ಒಂದು ವೇಳೆ ಭಕ್ತರ ಮುಂದೆ ಸ್ಪಷ್ಟಮೂರ್ತಿಯೇ ತೋರಿಸದಿದ್ದರೆ ಅವರಲ್ಲಿ ಆ ಸಂಸ್ಕಾರಗಳು ಹೇಗೆ ತುಂಬುವವು? ಈ ಕರ್ತವ್ಯವನ್ನೂ ಸಹ ಮಾಡಬೇಕು. ಕೇವಲ ಪ್ರಜೆ ಮಾಡುವುದಲ್ಲ ಜೊತೆಗೆ ಭಕ್ತರಲ್ಲಿಯೂ ಆ ಸಂಸ್ಕಾರಗಳನ್ನು ತುಂಬಬೇಕು. ಎಷ್ಟು ಪ್ರಜೆಗಳಾದರು ಮತ್ತು ಎಷ್ಟು ಭಕ್ತರಾದರು ಗೊತ್ತಾಗುವುದು. ಭಕ್ತರ ಮಾಲೆ ಮತ್ತು ಪ್ರಜೆಗಳ ಮಾಲೆ ಎರಡೂ ಪ್ರತ್ಯಕ್ಷವಾಗುವವು. ಪ್ರತಿಯೊಬ್ಬರಿಗೂ ತಮ್ಮ ಎರಡೂ ಮಾಲೆಗಳ ಸಾಕ್ಷಾತ್ಕಾರವಾಗುವುದು. ನಾನು ಮಾಲೆಯಲ್ಲಿ ಎಲ್ಲಿ ಪೋಣಿಸಲ್ಪಟ್ಟಿದ್ದೇನೆ ಎಂಬುದು ಸಹ ತಮಗೆ ಸಾಕ್ಷಾತ್ಕಾರವಾಗುವುದು ಕೆಲವರಿಗೆ ಜಾಸ್ತಿ ಭಕ್ತರಿರುವರು, ಕೆಲವರಿಗೆ ಪ್ರಜೆಗಳು ಜಾಸ್ತಿಯಾಗುವರು ಎಂಬುದು ಸಹ ಗುಪ್ತ ರಹಸ್ಯವಾಗಿದೆ. ಹೇಗೆ ಯಾವುದಾದರೂ ರಾಜಧಾನಿ ದೊಡ್ಡದಿದ್ದರೂ ಸಂಪತ್ತು ಕಡಿಮೆಯಿರುವುದು, ಕೆಲವರ ರಾಜಧಾನಿ ಚಿಕ್ಕದಿದ್ದರೂ ಸಂಪತ್ತು ಜಾಸ್ತಿಯಾಗಿರುವುದು. ಇದೂ ಗುಪ್ತ ರಹಸ್ಯವಾಗಿದೆ ಅದನ್ನು ಮತ್ತೆ ಯಾವಾಗಲಾದರೂ ಹೇಳುತ್ತೇವೆ. ಈಗ ಪ್ರಜೆಗಳನ್ನು ಮಾಡುವಂತಹ ಗುರಿಯಿಟ್ಟುಕೊಳ್ಳಿ. ಕೊನೆಯಲ್ಲಿ ಭಕ್ತರು ನಿಮಿಷದಲ್ಲಿ ತಯಾರಾಗುವರು. ಇಲ್ಲಿ ಭಕ್ತರು ವಂದನೆ ಮಾಡುವರು, ಪೂಜೆಯನ್ನಲ್ಲ. ಅವರೇ ಅಲ್ಲಿ ಪೂಜೆ ಮಾಡುವರು. ಇವೆಲ್ಲಾ ಅನಂತರ ತಿಳಿಯುತ್ತವೆ.

ಅವ್ಯಕ್ತ ಮುರಳಿ 29-06-1970.

***ಸಮರ್ಪಣೆಯ ವಿಶಾಲ ರೂಪ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವರ್ತಮಾನದಲ್ಲಿ ಸಂಪೂರ್ಣ ಸಫಲತಾ ಮೂರ್ತಿಯಾಗಿ ಭವಿಷ್ಯತ್ತಿನಲ್ಲಿ ಸಂಪೂರ್ಣ ರಾಜ್ಯಾಧಿಕಾರಿಯಾಗಿದ್ದೇನೆ.

2. ನಾನು ಸಂಪೂರ್ಣವಾಗಲು ಜ್ಞಾನಮೂರ್ತಿ, ಗುಣಮೂರ್ತಿ, ದಾನಮೂರ್ತಿ, ಸಫಲತಾ ಮೂರ್ತಿಯಾಗಿ ತಯಾರಾಗಿ, ನನ್ನ ಒಂದೇ ಮೂರ್ತಿಯಲ್ಲಿ ನಾಲ್ಕು ಮೂರ್ತಿಗಳನ್ನು ಸಾಕ್ಷಾತ್ಕಾರ ಮಾಡಿಸುವ ಚತುರ್ಮುಖಿ.

3. ನಾನು ಜನ್ಮಸಿದ್ಧ ಅಧಿಕಾರವಾಗಿ ಲಭಿಸುವ ಸುಖ, ಶಾಂತಿ, ಪವಿತ್ರತೆ, ಪ್ರೇಮ ಹಾಗೂ ಆನಂದದ ಅವಿನಾಶಿ ಪ್ರಾಪ್ತಿಯನ್ನು ಮತ್ತು ವಿನಾಶಿ ಧನವನ್ನು ಈಶ್ವರೀಯ ಸೇವೆಯಲ್ಲಿ ಸಮರ್ಪಣೆ ಮಾಡಿರುವ ಬಾಪ್ ಸಮಾನ ಸ್ವರೂಪ.

4. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಪ್ರತಿ ಸಂಕಲ್ಪ, ಪ್ರತಿಕ್ಷಣ, ಪ್ರತಿ ಕರ್ಮ, ಸಂಬಂಧ, ಅವಿನಾಶಿ ಸರ್ವ ಸಂಬಂಧಗಳನ್ನು ಸಮರ್ಪಣೆ ಮಾಡಿರುವ ಸಂಪೂರ್ಣತಾ ಮತ್ತು ಸಫಲತಾ ಮೂರ್ತಿ.

5. ನಾನು ಮಹಾದಾನಿ ಮತ್ತು ಶುಭ ಚಿಂತಕನಾಗಿ ನನ್ನತನವನ್ನು ಪೂರ್ತಿಯಾಗಿ ಸಮಾವೇಶಗೊಳಿಸಿ ಸಮರ್ಪಣೆಯಾಗಿದ್ದೇನೆ.

6. ನಾನು ಎಲ್ಲರನ್ನೂ ತಂದೆಯ ಸಮಾನವಾಗಿ ತಯಾರು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇನೆ.

7. ನಾನು ಒಬ್ಬನ ಸ್ಮೃತಿಯಲ್ಲಿ ಮಗ್ನವಾಗಿರುವ ಸಂಪೂರ್ಣ ಸ್ವರೂಪ.

8. ನಾನು ನನ್ನ ಮಸ್ತಕದಲ್ಲಿ ಹೊಳಪು ಮತ್ತು ನಯನದ ಕಾಂತಿಯಿಂದ ಮೂರನೇ ನೇತ್ರವನ್ನು (ಜ್ಞಾನ ನೇತ್ರ) ಸದಾ ಸ್ಥಿರವಾಗಿ ಇಟ್ಟುಕೊಂಡಿದ್ದೇನೆ.

9. ನಾನು ನನ್ನ ಬುದ್ಧಿಯನ್ನು ಸ್ಥಿರವಾಗಿ ಮತ್ತು ಏಕರಸವಾಗಿಟ್ಟು ಭಕ್ತರಿಗೆ ಸ್ಪಷ್ಟ ಸಾಕ್ಷಾತ್ಕಾರವನ್ನು ಮಾಡಿಸಿದ್ದೇನೆ.

10. ನಾನು ನನ್ನ ಸ್ಪಷ್ಟ ಸಾಕ್ಷಾತ್ಕಾರದಿಂದ ಎಲ್ಲರಲ್ಲಿ ಸಂಸ್ಕಾರಗಳನ್ನು ತುಂಬಿ, ನನ್ನ ರಾಜಧಾನಿಯನ್ನು (ಭಕ್ತರು, ಪ್ರಜೆಗಳು, ವಾರಸುದಾರರು) ಶ್ರೇಷ್ಠವಾಗಿ, ಉನ್ನತವಾಗಿ ತಯಾರು ಮಾಡಿಕೊಂಡಿದ್ದೇನೆ.